# ಋತುಬಂಧದ ನಂತರವೂ ರಕ್ತಸ್ರಾವವೇ?



**ಋತುಬಂಧದ ನಂತರವೂ ರಕ್ತಸ್ರಾವವಾಗುವುದು ಕೆಲವು ಮಹಿಳೆಯರಲ್ಲಿ ಸಾಮಾನ್ಯ ಸಮಸ್ಯೆ. ಮನಸ್ಸಿಗೆ ಕಿರಿಕಿರಿ ಉಂಟುಮಾಡುವ ಈ ಸಮಸ್ಯೆಯ ಕಡೆಗಣನೆ ಸಲ್ಲದು. ಸಂಕೋಚ ಬದಿಗಿಟ್ಟು ಸೂಕ್ತ ಚಿಕಿತ್ಸೆ ಪಡೆಯಲೇಬೇಕಾದ ಅಗತ್ಯವಿದೆ.**

**■ ಡಾ. ವೀಣಾ ಎಸ್. ಭಟ್**

ಐವತ್ತಾರು ವರ್ಷದ ಲಕ್ಷ್ಮಮ್ಮನಿಗೆ ಮುಟ್ಟು ನಿಂತು ಹೋಗಿ 10 ವರ್ಷವಾಗಿತ್ತು. ಒಮ್ಮಿಂದೊಮ್ಮೆಲೆ ಅವರಿಗೆ ಒಂದು ದಿನ ಮತ್ತೆ ಕೆಂಪು ಮುಟ್ಟಿನ ಸ್ರಾವವಾದಾಗ ಗಾಬರಿಯಿಂದ ಅವರ ಮನೆ ಮೇಲೆ ಬಾಡಿಗೆ ಇದ್ದ ಲೇಡಿ ಟೀಚರ ಬಳಿ ತಮ್ಮ ನೋವನ್ನು ಹೇಳಿಕೊಂಡರು. ಅವರು ಕೆಲವರಲ್ಲಿ ಹೀಗೆ ಆದಾಗ ಕ್ಯಾನ್ಸರ್ ಅಂತಾ ರಿಪೋರ್ಟ್ ಬರಬಹುದು ಎಂದಾಗ ಗಾಬರಿಯಿಂದ ಅಂದೇ ಆಸ್ಪತ್ರೆಗೆ ತಪಾಸಣೆಗಾಗಿ ಬಂದರು. ಸ್ತ್ರೀರೋಗ ತಜ್ಞರು ಅವರಿಗೆ ಸ್ಕ್ಯಾನಿಂಗ್, ಎಂಡೋಮೆಟ್ರಿಯಲ್ ಬಯಾಪ್ಸಿ, ಪಾಪ್‌ಸ್ಮಿಯರ್ ಎಲ್ಲಾ ತಪಾಸಣೆ ಮಾಡಿ ಏನೂ ತೊಂದರೆ ಇಲ್ಲ ಎಂದು ರಿಪೋರ್ಟ್ ಬಂದ ಮೇಲೆ ನಿರಾಳವಾದಳು. ಆದರೂ ವೈದ್ಯರು ವರ್ಷಕ್ಕೊಮ್ಮೆ ತಪಾಸಣೆಗೆ ಬರಲು ತಿಳಿಸಿದರು.

ಗಂಗಾಬಾಯಿಗೆ 48 ವರ್ಷ. ಮುಟ್ಟು ನಿಂತು ಹೋಗಿ 3 ವರ್ಷವಾಗಿತ್ತು. ಇತ್ತೀಚೆಗೆ ಇವರ ಸಮಸ್ಯೆ ಎಂದರೆ ಕೆಂಪು ಬಿಳಿ ಬ್ಲೀಡಿಂಗ್‌ನದ್ದು. ಅವಳನ್ನು ಪರೀಕ್ಷಿಸಿದಾಗ ಗರ್ಭಕಂಠದಲ್ಲಿ (ಸರ್ವಿಕ್ಸ್) ಕ್ವಾಲಿಫ್ಲವರ್‌ನಂತಹ ಗಡ್ಡೆ ಇತ್ತು. ಮುಟ್ಟಿದರೆ ರಕ್ತಸ್ರಾವವಾಗುತ್ತಿತ್ತು. ಅದು ಸರ್ವೈಕಲ್ ಕ್ಯಾನ್ಸರ್ ಎಂಬುದು ಬಯಾಪ್ಸಿ ಮಾಡಿ ಅದರ ವರದಿ ಬಂದಾಗ ತಿಳಿದು ಬಂತು. ನಂತರ ಸೂಕ್ತ ವಿಕಿರಣ ಚಿಕಿತ್ಸೆಯನ್ನೂ ಕೊಡಲಾಯಿತು. ಅವಳು ಸಂಪೂರ್ಣ ಗುಣಮುಖರಾಗಿ 10 ವರ್ಷಗಳ ನಂತರವೂ ಇಂದಿಗೂ ಸಹಜ ಜೀವನ ನಡೆಸುತ್ತಿದ್ದಾಳೆ.

ಲೀಲಾ ವೃತ್ತಿಯಲ್ಲಿ ಬ್ಯಾಂಕ್ ಆಫೀಸರಾಗಿದ್ದು 50 ವರ್ಷಕ್ಕೆಲ್ಲಾ ಅವಳಿಗೆ ಮುಟ್ಟು ನಿಂತೇ ಹೋಗಿತ್ತು. ಮತ್ತೆ 6 ವರ್ಷ ಬಿಟ್ಟು ಕೆಂಪು ರಕ್ತಸ್ರಾವ ಕಾಣಿಸಿಕೊಂಡಾಗ ವೈದ್ಯರು ತಪಾಸಣೆ ಮಾಡಲೇ ಬೇಕಾಯಿತು. ಬಯಾಪ್ಸಿ ರಿಪೋರ್ಟ್ ನಲ್ಲಿ ಎಂಡೋಮೆಟ್ರಿಯಲ್ ಕ್ಯಾನ್ಸರ್ ಎಂದು ಗೊತ್ತಾದಾಗ ಆಕೆ ಧೈರ್ಯಗೆಡದೆ ಗರ್ಭಕೋಶ ತೆಗೆಸಿಕೊಂಡರು. ವೈದ್ಯರ ಸೂಕ್ತ ಮೇಲ್ವಿಚಾರಣೆ ಹಾಗೂ ನಿಯಮಿತ ಚಿಕಿತ್ಸೆಯಿಂದ ಕಳೆದ 10 ವರ್ಷದಿಂದ ಜೀವನಶೈಲಿ ಬದಲಿಸಿಕೊಂಡು ಆರೋಗ್ಯಕರ ಜೀವನ ನಡೆಸುತ್ತಿದ್ದಾಳೆ.

ನನ್ನ ಹತ್ತಿರದ ಸಂಬಂಧಿ ಗೌರಮ್ಮನಿಗೆ 70 ವರ್ಷ. ಅವರು ಅತ್ಯಂತ ಸಂಕೋಚದಿಂದ ನನಗೆ ಮುಟ್ಟು ನಿಂತು 20 ವರ್ಷಗಳೇ ಆದವು. ಆದರೂ ಈ ವಯಸ್ಸಿನಲ್ಲಿ ಮತ್ತೆ ಯಾಕೋ ಕೆಂಪು ಹೋಗುತ್ತಿದೆ ಎಂದಾಗ ಪರೀಕ್ಷಿಸಿದಾಗ ಕೇವಲ ಯೋನಿ ಸೋಂಕಾಗಿದ್ದು ಅದರಿಂದ ಕೆಂಪುಸ್ರಾವವಾಗುತ್ತಿತ್ತು. ಸೂಕ್ತ ಆಂಟಿಬಯಾಟಿಕ್ ಮಾತ್ರೆ ಹಾಗೂ ಮುಲಾಮಿನ ಚಿಕಿತ್ಸೆಯ ನಂತರ ಸರಿಹೋಯಿತು. ಹಾಗಾದರೆ ಮುಟ್ಟು ನಿಂತ ಮೇಲೂ ರಕ್ತಸ್ರಾವವಾಗಬಹುದೇ? ಈ ಮೇಲಿನ ನಾಲ್ಕೂ ವಿವಿಧ ಉದಾಹರಣೆಗಳು ಈ ಮಾತನ್ನು ಪುಷ್ಟೀಕರಿಸುತ್ತವೆ.

ಹೌದು, ಮುಟ್ಟು ನಿಂತ ಒಂದು ವರ್ಷಕ್ಕೂ ಹೆಚ್ಚಿನ ಸಮಯದ ನಂತರ ಮತ್ತೆ ಮುಟ್ಟಿನ ಸ್ರಾವ ಪ್ರಾರಂಭವಾದರೆ, 52 ವರ್ಷ ನಂತರವೂ ಮುಟ್ಟಾಗುತ್ತಿದ್ದರೆ ಅದನ್ನು ‘ಪೋಸ್ಟ್ ಮೆನೋಪಾಸಲ್ ಬ್ಲೀಡಿಂಗ್’ ಅಥವಾ ‘ಋತುಬಂಧದ ನಂತರದ ರಕ್ತಸ್ರಾವ’ ಎನ್ನುತ್ತೇವೆ.

ಇದು ಒಂದು ಬಾರಿ ಕಾಣಿಸಿಕೊಳ್ಳಬಹುದು ಅಥವಾ ಪದೇ ಪದೇ ಆಗಬಹುದು. ಸಾವಿರದಲ್ಲಿ 14– 15 ಜನಕ್ಕೆ ಮಾತ್ರ ಇದು ಕಂಡುಬರುತ್ತದೆ. ಇದರಲ್ಲಿ ಶೇ.10 ರಷ್ಟು ಮಾತ್ರ ಗರ್ಭಾಶಯದ ಒಳಾವರಣದ ಕ್ಯಾನ್ಸರ್‌ನಿಂದ ಆಗಿರುತ್ತದೆ (ಎಂಡೋಮೆಟ್ರಿಯಲ್ ಕ್ಯಾನ್ಸರ್) ಈ ಕ್ಯಾನ್ಸರ್‌ನ ಸಂಭವ 60 ವರ್ಷದ ನಂತರ ಶೇ.13ಕ್ಕೆ ಏರುತ್ತದೆ. ಮತ್ತು ಇದು ಹಾರ್ಮೋನುಗಳ ಪುನರ್ಭರಿಸುವ ಚಿಕಿತ್ಸೆ (ಹೆಚ್.ಆರ್.ಟಿ ಕೇವಲ ಈಸ್ಟ್ರೋಜನ್ ಮಾತ್ರ ತೆಗೆದುಕೊಂಡವರಲ್ಲಿ) ಪಡೆದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸ್ತನದ